# CORRUPTION AWARNESS DRIVE

# 27-10-2020

**"ಭ್ರಷ್ಟಾಚಾರವು ಇಂದು ಸಮಾಜದ ಯಾವುದೇ ಕ್ಷೇತ್ರವನ್ನು ಬಿಡದೆ ತನ್ನ ಕಬಂಧ ಬಾಹುಗಳಿಂದ ಚಾಚಿಕೊಂಡಿರುವುದು ಆತಂಕಕಾರಿಯಾಗಿದೆ. ಮಾಹಿತಿ ಹಕ್ಕು ಕಾಯ್ದೆಯು ಭ್ರಷ್ಟಾಚಾರ ನಿರ್ಮೂಲನೆಗೆ ಪರಿಣಾಮಕಾರಿ ಅಸ್ತ್ರವಾಗಿದೆ " ಎಂದು ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರೊ.ಎಸ್.ಬಿ.ಬೋರೇಗೌಡ ಅವರು ಅಭಿಪ್ರಾಯಪಟ್ಟರು.**

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ 27–10–2020 ಮಂಗಳವಾರ ದ'ಂದು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಅವರು **"ಭ್ರಷ್ಟಾಚಾರ ಜಾಗೃತಿ ಕುರಿತು ಅರಿವು"** ಎಂಬ ವಿಷಯವನ್ನು ಕುರಿತು ಮಾತನಾಡುತ್ತಾ ಭ್ರಷ್ಟಾಚಾರ ಎಂದರೇನು? ಅದು ಸಾಮಾನ್ಯವಾಗಿ ಎರಡು ರೀತಿಯಲ್ಲಿ ನಡೆಯುತ್ತದೆ. ಆಂತರಿಕ ಭ್ರಷ್ಟಾಚಾರ ಮತ್ತು ಬಾಹ್ಯ (ನಡವಳಿಕೆಯಲ್ಲಿ) ಭ್ರಷ್ಟಾಚಾರ ಎಂದು ತಿಳಿಸಿದರು.

ಸಾಮಾನ್ಯವಾಗಿ ಭ್ರಷ್ಟಾಚಾರವನ್ನು ಹೀಗೆ ವಿವರಿಸಬಹುದು. ಸರ್ಕಾರಿ ಅಧಿಕಾರಿಯು ವೇತನವಲ್ಲದೆ ತನ್ನ ಕೆಲಸಕ್ಕೆ ಇತರೆ ರೂಪದ ನಗದು ಪಡೆದು ಕೊಂಡರೆ ಅದು ಭ್ರಷ್ಟಾಚಾರವಾಗುತ್ತದೆ. ಸಮಾಜದ ಎಲ್ಲೆಡೆಯು ಈ ಭ್ರಷ್ಟಾಚಾರವು ನಡೆಯುತ್ತಿದೆ. ಭ್ರಷ್ಟಾಚಾರ ದೇಶದ ಆರ್ಥಿಕತೆಗೆ ಹೆಚ್ಚು ಹೊಡೆತ ಬೀಳುವಂತೆ ಮಾಡುತ್ತದೆ. ಅಪ್ರಮಾಣಿಕತೆಯ ವ್ಯಕ್ತಿ ಈ ರೀತಿಯ ಭ್ರಷ್ಟಾಚಾರದಲ್ಲಿ ತೊಡುಗುತ್ತಿದ್ದಾನೆ. ನೈತಿಕತೆಯ ಕೊರತೆ, ಭ್ರಷ್ಟಾಚಾರಕ್ಕೆ ಪ್ರಮುಖ ಕಾರಣವಾಗಿದೆ. ಈ ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕಾದರೆ ಬಲಿಷ್ಠ ನಾಯಕತ್ವ ಮತ್ತು ಪ್ರಜೆಗಳು ಕಾನೂನು ಪಾಲನೆಯನ್ನು ಪ್ರಾಮಾಣಿಕವಾಗಿ ಮಾಡಿದರೆ ಆಗಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಬಿ.ಎಂ.ಮಂಜುಳ ಅವರು ಎಲ್ಲರಿಗೂ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾಲೇಜಿನ ಶೈಕ್ಷಣಿಕ ನಿರ್ದೇಶಕರಾದ ಡಾ.ಎಸ್. ಮರೀಗೌಡ ಅವರು ಕಾರ್ಯಕ್ರಮ ಕುರಿತು ಮಾತನಾಡಿದರು. ಅಧ್ಯಾಪಕ ಸಲಹೆಗಾರರಾದ ಪ್ರೊ.ಮೋಹನ್‌ಕುಮಾರ್.ಎನ್ ಅವರು ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಮಂಜು.ಜೆ. ಅವರು ಪ್ರಾರ್ಥಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಹಾಯಕ ಪ್ರಾಧ್ಯಾಪಕರಾದ ಡಾ.ರಘು.ಬಿ.ಟಿ ಅವರು ಕಾರ್ಯಕ್ರಮವನ್ನು ನಿರೂಪಿಸಿದರೆ ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಸತೀಶ್.ಟಿ. ಅವರು ಎಲ್ಲರನ್ನು ವಂದಿಸಿದರು.


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು
"ಭ್ರಷ್ಟಾಚಾರ ಜಾಗೃತಿ ಅರಿವು"
"ವಿಶೇಷ ಉಪನ್ಯಾಸ"
ಸಹಾಯಕ ಪ್ರಾಧ್ಯಾಪಕರು
ವಿದ್ಯಾವರ್ಧಕ ಕಾನೂನು ಕಾಲೇಜು,
ಮೈಸೂರು.
ದಿನಾಂಕ : 27.10.2020
ಸಮಯ : 11.00 ಗಂಟೆಗೆ





























